**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 1075/2024**

**ಸಾಕ್ಷಿಯನ್ನು ದಿಃ 30.12.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಅರ್ಜಿಯ ಮೇಲಿನ ಆದೇಶದಂತೆ ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಪಿ ಕೆ ಆರ್ ವಕೀಲರಿಂದಃ**

ನಾನು ದ್ವಿತಿಯ ಪಿಯುಸಿ ಓದಿದ್ದೇನೆ. 1ನೇ ಆರೋಪಿ ಏನು ಓದಿದ್ದಾರೆ ಎಂದು ಗೊತ್ತಿಲ್ಲ. 2ನೇ ಆರೋಪಿ ನನ್ನ ಸ್ವಂತ ಅಜ್ಜಿ. 2ನೇ ಆರೋಪಿಗೆ ಒಟ್ಟು 8 ಜನ ಮಕ್ಕಳು. ಅವರ ಹೆಸರು ಸಣ್ಣೊಳಮ್ಮ, ಶಿವಯ್ಯ, ನನ್ನ ತಾಯಿ ಕಮಲಮ್ಮ, ನಾಗರಾಜು, ರತ್ನಮ್ಮ , ಕಮಲ , ಕುಮಾರ ಮತ್ತು 1ನೇ ಆರೋಪಿ ಎಂದರೆ ಸರಿ. ನನ್ನ ಮತ್ತು 1ನೇ ಆರೋಪಿಯ ಮದುವೆಯ ಸಮಯದಲ್ಲಿ ನನ್ನ ತಾಯಿ ಕಮಲಮ್ಮ ಬದುಕಿದ್ದರು. ನನ್ನ ತಾಯಿ ತೀರಿ ಹೋಗಿ 10 ವರ್ಷ ಆಯಿತು. ನನ್ನ ತಂದೆ ತಾಯಿಗೆ ನಾವು 3 ಜನ ಮಕ್ಕಳು. ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ. ನನ್ನ ತಂದೆಗೆ ಒಂದು ಎಕರೆ ಜಮೀನಿದೆ. ಸದರಿ ಜಮೀನು ನನ್ನ ತಂದೆಯ ತಾಯಿಯ ಹೆಸರಿನಲ್ಲಿದೆ. ನನ್ನ ತಂದೆಗೆ ಇಬ್ಬರೂ ಸಹೋದರರು ಇದ್ದಾರೆ. ನನ್ನ ತಂದೆ ಮತ್ತು ಅವರ ಸಹೋದರನಿಗೆ ತಲಾ ಒಂದು ಎಕರೆ ಜಮೀನಿದೆ. ಈ ಹಿಂದೆ ಪಂಪ್ ಸೆಟ್ ಇರಲಿಲ್ಲ. ಈಗ ಹಾಕಿಸಿದ್ದಾರೆ. ಮದುವೆಯ ಸಮಯದಲ್ಲಿ ಸದರಿ ಜಮೀನಿಗೆ ಪಂಪ್ ಸೆಟ್ ಇರಲಿಲ್ಲ. ನನ್ನ ತಂದೆ ರಾಗಿ , ಹುರುಳಿ, ಅಲಸಂದೆ ಬೆಳೆಯುತ್ತಾರೆ. ಕೃಷಿ ಆದಾಯ ಮನೆ ಖರ್ಚಿಗೆ ಆಗುತ್ತಿತ್ತು.

ನನಗೆ ಮದುವೆ ಆಗುವಾಗ 18 ವರ್ಷ ವಯಸ್ಸಾಗಿತ್ತು. ಮದುವೆಯ ಸಮಯದಲ್ಲಿ 1ನೇ ಆರೋಪಿ 27-28 ವಯಸ್ಸಾಗಿತ್ತು. ಮದುವೆಯ

ಸಮಯದಲ್ಲಿ 1ನೇ ಆರೋಪಿ ಗಾರ್ಮೆಂಟ್ಸ್ ಗೆ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಗೊತ್ತಿಲ್ಲ. ಮದುವೆಯಾದ ನಂತರ ಅವರು ವ್ಯವಸಾಯ ಮಾಡುತ್ತಿದ್ದರು. ಮದುವೆಯ ಸಮಯದಲ್ಲಿ1ನೇ ಆರೋಪಿ ಬೆಳವಾಡಿಯ ಹತ್ತಿರ ಗೋಕುಲ್ ದಾಸ್ ಎಂಬ ಗಾರ್ಮೆಂಟ್ಸ್ ಗೆ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಗೊತ್ತಿಲ್ಲ. ನನ್ನ ಮತ್ತು 1ನೇ ಆರೋಪಿಯ ಮದುವೆ 2014 ರಲ್ಲಿ ಆಗಿತ್ತು. ಮದುವೆಯಾದ ನಂತರ ನಾನು 8 ವರ್ಷ 1ನೇ ಆರೋಪಿಯ ಮನೆಯಲ್ಲಿದ್ದೆ. ಮದುವೆಯಾದ ನಂತರ 1ನೇ ಆರೋಪಿ ಕೆಲಸಕ್ಕೆ ಹೋದ ಮೇಲೆ ಮನೆಯಲ್ಲಿ 2ನೇ ಆರೋಪಿ ಮತ್ತು ಅವರ ಗಂಡ ಮಾತ್ರ ಇರುತ್ತಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಗಂಡನ ಮನೆಗೆ ನನ್ನ ತಾಯಿಯ ಊರಿನ ಸಿದ್ದಯ್ಯನ ಮಗ ರವಿ ಬಂದು ಹೋಗುತ್ತಿದ್ದ ಎಂದರೆ ಆತ ಯಾರೆಂದು ನನಗೆ ಗೊತ್ತಿಲ್ಲ. ಆಗ ನನ್ನ ಅತ್ತೆ ಮಾವ ಈತ ಏಕೆ ಮನೆಗೆ ಬರುತ್ತಿದ್ದಾನೆ , ಯಾರು ಎಂದು ನನ್ನನ್ನು ಪ್ರಶ್ನೆ ಮಾಡಿದರು ಎಂದರೆ ಆತ ಯಾರೆಂದು ನನಗೆ ಗೊತ್ತಿಲ್ಲ. ಆಗ ನಾನು ಆತ ನಮ್ಮ ನೆಂಟರು ಎಂದು ಹೇಳಿದ್ದು , ನೆಂಟರಾದರೆ ತಮಗೂ ಕೂಡ ನೆಂಟರಾಗಬೇಕಿತ್ತಲ್ಲ ಎಂದು ನನ್ನ ಅತ್ತೆ ಮಾವನಾದ ಅಜ್ಜ ಅಜ್ಜಿ ಕೇಳಿದರು ಎಂದರೆ ಆತ ಯಾರೆಂದು ನನಗೆ ಗೊತ್ತಿಲ್ಲ. ಸದರಿ ರವಿ ಬಂದು ಹೋಗುತ್ತಿದ್ದ ಬಗ್ಗೆ ನನ್ನ ಅಜ್ಜ ಅಜ್ಜಿ ಮತ್ತು ಗಂಡ ನನ್ನ ತಂದೆಗೆ ಕೂಡ ಹೇಳಿ ಬುದ್ದಿವಾದ ಹೇಳುವಂತೆ ಹೇಳಿದರೂ ಎಂದರೆ ಆತ ಯಾರೆಂದು ನನಗೆ ಗೊತ್ತಿಲ್ಲ.

ನಾವು ಕಡು ಬಡತನದಲ್ಲಿದ್ದ ಕಾರಣ ಹಾಗೂ ನಾನು 1ನೇ ಆರೋಪಿಯ ಅಕ್ಕನ ಮಗಳಾದ ಕಾರಣ ಎಲ್ಲರೂ ಇಷ್ಟ ಪಟ್ಟು ನನಗೆ 1ನೇ ಆರೋಪಿಗೆ ಮದುವೆ ಮಾಡಿಕೊಟ್ಟರು ಎಂದರೆ ಮನೆಯವರಿಗೆ ಇಷ್ಟ ಇತ್ತು ಆದರೆ 1ನೇ ಆರೋಪಿಗೆ ಇಷ್ಟ ಇರಲಿಲ್ಲ. ಮದುವೆಯಾದ ನಂತರ ನಾನು ಕ ಕೇವಲ 6

ತಿಂಗಳು ಮಾತ್ರ ಗಂಡನ ಮನೆಯಲ್ಲಿದ್ದು ನಂತರ ತಂದೆಯ ಮನೆಗೆ ಹೋದೆ ಎಂದರೆ ಸರಿಯಲ್ಲ. ನನ್ನ ಮಾವ ತೀರಿ ಹೋಗಿ 2 ವರ್ಷ ಆಗಿರಬಹುದು. ನಾನು ಅವರ ಸಾವಿಗೆ ಹೋಗಿಲ್ಲ.

ಮದುವೆಯಾದ 4 ವರ್ಷಗಳ ನಂತರ ಆರೋಪಿತರ ಊರಿನ ಹಿರಿಯರು ನನ್ನ ತಂದೆಯ ಊರಿನ ಹಿರಿಯರು ಸೇರಿ ನನ್ನ ತಂದೆಯ ಊರಿನಲ್ಲಿ ಪಂಚಾಯ್ತಿ ಮಾಡಿದರು ಎಂದರೆ ಸರಿ. ಸದರಿ ಪಂಚಾಯ್ತಿಯಲ್ಲಿ ನನ್ನ ತಂದೆಯ ಊರಿನ ಯಜಮಾನರಾದ ವೆಂಕಟೇಶ್ ಇದ್ದರು ಎಂದರೆ ಸರಿ. ಆ ಪಂಚಾಯ್ತಿಯಲ್ಲಿ ಊರಿನ ಯಜಮಾನರೆಲ್ಲಾ ಸೇರಿದ್ದಾಗ ನಾನು 1ನೇ ಆರೋಪಿಯೊಂದಿಗೆ ಬಾಳಾಟ ಮಾಡುವುದಿಲ್ಲ ಎಂದು ಹೇಳಿ ಕತ್ತಿನಲ್ಲಿದ್ದ ಮಾಂಗಲ್ಯವನ್ನು ಕಿತ್ತು ಕೊಟ್ಟೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ರೀತಿ ಪಂಚಾಯ್ತಿ ಆದಾಗ 1ನೇ ಆರೋಪಿಯೂ ಖಾಲಿ ಹಾಳೆಗೆ ಸಹಿ ಹಾಕುವಂತೆ ಒತ್ತಾಯ ಮಾಡಿದಾಗ ಅಲ್ಲಿ ಗಲಾಟೆಯಾಗಿ ನನ್ನನ್ನು ತಂದೆಯ ಮನೆಗೆ ಬಿಟ್ಟು ನಂತರ ಪಂಚಾಯ್ತಿ ಮುಂದುವರೆಯಿತು ಎಂದು ನುಡಿಯುತ್ತಾರೆ. ಮದುವೆಯಾದ 4 ವರ್ಷಗಳ ನಂತರ ಮೇಲೆ ಹೇಳಿದಂತೆ ಗಲಾಟೆಯಾಗಿ ಪಂಚಾಯ್ತಿಯಾಗಿದೆ ಎಂದು ಸಾಕ್ಷಿ ನುಡಿಯುತ್ತಾರೆ. ಆ ರೀತಿ ಗಲಾಟೆಯಾದ ಬಗ್ಗೆ ದೂರು ಕೊಟ್ಟಿದ್ದೀರಾ ಎಂದರೆ ಬಿಳಿಕೆರೆ ಠಾಣೆಗೆ ದೂರು ಕೊಡಲು ಹೋದಾಗ ಮಹಿಳಾ ಠಾಣೆಗೆ ದೂರು ಕೊಡುವಂತೆ ಹೇಳಿದ್ದರಿಂದ ಮೈಸೂರು ಜಿಲ್ಲಾ ಮಹಿಳಾ ಠಾಣೆಯಲ್ಲಿ ದೂರು ಕೊಟ್ಟಿದ್ದೇನೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ಪಂಚಾಯ್ತಿ ನಡೆದಾಗ ನಾನು 1ನೇ ಆರೋಪಿಯೊಂದಿಗೆ ಬಾಳಾಟ ಮಾಡುವುದಿಲ್ಲ ಎಂದು ತಾಳಿಯನ್ನು ವಾಪಸ್ಸು ಕೊಟ್ಟಾಗ ಬಾಳಾಟ ಮಾಡದೇ ಇದ್ದರೂ ತೊಂದರೆ ಇಲ್ಲ ತಾಳಿಯನ್ನು ಕತ್ತಿಗೆ ಹಾಕುವಂತೆ ನನಗೆ ವಾಪಸ್ಸು ಕೊಟ್ಟರು ಎಂದರೆ ಸರಿಯಲ್ಲ.

ಆ ರೀತಿ ಗಲಾಟೆಯಾದ ನಂತರದಿಂದ ನಾನು ಪೂರ್ತಿಯಾಗಿ ತಾಯಿಯ ಮನೆಯಲ್ಲಿಯೇ ವಾಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಗಂಡನ ಮನೆಯಲ್ಲಿಯೇ ವಾಸ ಇದ್ದೆ. ಯಾವ ಕಾರಣಕ್ಕಾಗಿ ಮಾವನ ಸಾವಿಗೆ ಹೋಗಲಿಲ್ಲ ಎಂದರೆ ನನ್ನ ಅತ್ತೆ ಮಾವ ಕುಡಿದು ನನಗೆ ಹಿಂಸೆ ಕಿರುಕುಳ ನೀಡುತ್ತಿದ್ದು ನನ್ನ ಗಂಡನಿಗೂ ಹೇಳಿಕೊಡುತ್ತಿದ್ದ ಕಾರಣ ಅವರ ಸಾವಿಗೆ ಹೋಗಿಲ್ಲ. ನನ್ನ ಮಾವ ತೀರಿ ಹೋಗುವ ಸಮಯದಲ್ಲಿ ನಾನು ತಂದೆಯ ಮನೆಯಲ್ಲಿದ್ದೆ. ನಾನು ತಂದೆಯ ಮನೆಯಿಂದ ಗಂಡನ ಮನೆಗ ಬಂದು ನಂತರ ದೂರನ್ನು ಕೊಟ್ಟಿದ್ದೇನೆ. ನಾನು ಒಬ್ಬಳೇ ಗಂಡನ ಮನೆಗೆ ಬಂದಿದ್ದೆ. 04.03.2024 ರಂದು ಗಂಡನ ಮನೆಗೆ ಬಂದಿದ್ದೆ. ಅದಕ್ಕೂ ಮೊದಲು ಗಂಡನ ಮನೆಯಲ್ಲಿಯೇ ಇದ್ದೆ. 04.03.2024 ಕ್ಕೂ ಹಿಂದೆ ಸುಮಾರು 15 ದಿನ ನಾನು ತಂದೆಯ ಮನೆಯಲ್ಲಿದ್ದಾಗ 1ನೇ ಆರೋಪಿ 2ನೇ ಮದುವೆ ಆಗಿದ್ದಾರೆ ಎಂದು ತಿಳಿದು ಪುನಃ ಗಂಡನ ಮನೆಗೆ ಬಂದೆ. ದಿನಾಂಕಃ 05.03.2024 ರಂದು ದೂರನ್ನು ಕೊಟ್ಟಿದ್ದೇನೆ. ನನಗೆ ರೂ.10ಲಕ್ಷ ಜೀವಾನಾಂಶ ಕೊಡುತ್ತೇನೆ ಎಂದು ಹೇಳಿ ಕೊಡದೇ ಇದ್ದ ಕಾರಣ ದೂರನ್ನು ಕೊಟ್ಟಿದ್ದೇನೆ. ರೂ.10 ಲಕ್ಷ ಕೊಡಿ ಎಂದು ನಾನು ದೂರನ್ನು ಕೊಟ್ಟಿಲ್ಲ. 1ನೇ ಆರೋಪಿಯ ಮನೆಯ ಅಕ್ಕಪಕ್ಕ ಬೇರೆ ವಾಸದ ಮನೆಗಳು ಇವೆ. ಅಲ್ಲಿ ಜನರು ವಾಸವಿದ್ದು ಓಡಾಡುತ್ತಾ ಇರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ದಿನ ಜನರು ಓಡಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ದಿನಾಂಕಃ 05.03.2024 ರಂದು ದೂರನ್ನು ಕೊಟ್ಟಿದ್ದೇನೆ. ಪ್ರಕರಣ ದಾಖಲಾಗಿರುವುದು 25.03.2024 ರಂದು ಎಂದರೆ ಸರಿ. ಘಟನೆಗೂ ಪ್ರಕರಣ ದಾಖಲಾಗಿರುವ ದಿನಾಂಕಕ್ಕೂ 21 ದಿನ ವಿಳಂಬವಾಗಿದೆ ಎಂದರೆ ಸರಿ.

ದೂರನ್ನು ಸೋಮಣ್ಣ ಬರೆದಿದ್ದಾರೆ. ದೂರನ್ನು ತಯಾರಿಸಲು ನನ್ನ ತಂದೆ ಮಾಹಿತಿ ಕೊಟ್ಟಿದ್ದಾರೆ. ದೂರಿನಲ್ಲಿ ಏನು ಬರಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 05.03.2024 ರಂದು ನಾನು ನೀಡಿದ ದೂರಿನಲ್ಲಿ ಹುರುಳಿದ್ದರೆ ಆ ದೂರಿನ ಮೇರೆಗೆ ಪ್ರಕರಣ ದಾಖಲು ಮಾಡುತ್ತಿದ್ದರೂ ಎಂದರೆ ಸರಿಯಲ್ಲ. ದಿನಾಂಕಃ 04.03.2024 ರಂದು ಮಧ್ಯಾಹ್ನ 2.00 ಗಂಟೆಗೆ ನಾನು ಗಂಡನ ಮನೆಗೆ ಹೋಗಿ ನನ್ನ ಅತ್ತೆಯಾದ 2ನೇ ಆರೋಪಿ ಮತ್ತು ನನ್ನ ಮೇಲೆ ಸೀಮೆ ಎಣ್ಣೆ ಸುರಿದು ಕೊಂಡು ನಾನು ವಾಪಸ್ಸು ತವರು ಮನೆಗೆ ಹೋಗಿದ್ದು ಅದರಿಂದಾಗಿ 2ನೇ ಆರೋಪಿಗೆ ಗಾಯಗಳಾಗಿ ದಿನಾಂಕಃ 04.03.2024 ರಿಂದ 06.03.2024 ರವರೆಗೆ ಹುಣಸೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ನನ್ನನ್ನು ನನ್ನ ತಂಗಿ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ನನ್ನ ಗಂಡನ ಊರಿನಿಂದ ಬಿಳಿಕೆರೆ ಎಷ್ಟು ದೂರ ಎಂದರೆ ಗೊತ್ತಿಲ್ಲ. ಬಿಳಿಕೆರೆ ಯಿಂದ ನನ್ನ ಗಂಡನ ಊರು 3-4 ಕಿ.ಮೀ. ದೂರ ಎಂದರೆ ಸರಿಯಾಗಿ ಗೊತ್ತಿಲ್ಲ. ನನ್ನ ಗಂಡನ ಊರಿನಿಂದ ಮೈಸೂರಿಗೆ ಹೋಗಬೇಕಾದರೆ ಬಿಳಿಕೆರೆ ಮಾರ್ಗವಾಗಿ ಹೋಗಬೇಕು ಎಂದರೆ ಸರಿ. ಬಿಳಿಕೆರೆಯಲ್ಲಿ ಕ್ಲಿನಿಕ್ ಮತ್ತು ಸಾರ್ವಜನಿಕ ಆಸ್ಪತ್ರೆ ಇದೆ ಎಂದರೆ ಗೊತ್ತಿಲ್ಲ. ನನ್ನ ಗಂಡನ ಊರಿನಿಂದ ಹುಣಸೂರಿಗೆ ಎಷ್ಟು ದೂರ ಎಂದರೆ ಗೊತ್ತಿಲ್ಲ. ನನಗೆ ಗಾಯಾಗಳಾಗಿದ್ದರೆ ಚಿಕಿತ್ಸೆ ಪಡೆಯಲು ಹುಣಸೂರು ಅಥವಾ ಬಿಳಿಕೆರೆಗೆ ಹೋಗುತ್ತಿದ್ದೆ, ಆರೋಪಿತರಿಗೆ ತೊಂದರೆ ಕೊಡಬೇಕೆಂದು ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ತಂಗಿ ಆಸ್ಪತ್ರೆಗೆ ದಾಖಲಿಸಿದ್ದಾಳೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಆಸ್ಪತ್ರೆಗೆ ಸ್ವಾಮಿ ಎನ್ನುವ ವ್ಯಕ್ತಿ ಕರೆದುಕೊಂಡು ಹೋಗಿದ್ದಾರೆ

ಎಂದರೆ ಸರಿಯಲ್ಲ. ದಿನಾಂಕಃ 04.03.2024 ರಂದು ನಾನು ಸ್ವಾಮಿ ಎನ್ನುವವರ ಮುಖಾಂತರ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿಲ್ಲ. ನನ್ನ ಬಟ್ಟೆ ಹರಿದಿಲ್ಲ. ನನಗೆ ರಕ್ತ ಗಾಯವಾಗಿಲ್ಲ. ಪೊಲೀಸರು ಏನು ಅಮಾನತ್ತು ಪಡಿಸಿಕೊಂಡರು ಎಂದು ಗೊತ್ತಿಲ್ಲ. ನಾನು ಆಸ್ಪತ್ರೆಯಲ್ಲಿ ಒಂದು ದಿನ ಮಾತ್ರ ಇದ್ದೆ. ವೈದ್ಯರ ಮುಂದೆ ಘಟನೆಯ ಬಗ್ಗೆ ಹೇಳಿದ್ದೀರಾ ಎಂದರೆ ಹೇಳಿದ್ದೇನೆ. ಪೋಲಿಸರು ಆಸ್ಪತ್ರೆಗೆ ಬಂದು ಹೇಳಿಕೆ ಪಡೆದುಕೊಂಡಿಲ್ಲ. ದಿನಾಂಕಃ 26.03.2024 ರಂದು ಮಹಜರು ಮಾಡಿದ್ದಾರೆ. ಮಹಜರು ಸಮಯದಲ್ಲಿ ಘಟನೆಯ ಬಗ್ಗೆ ಹೇಳಿದರು. ಮಹಜರಿನಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ. ಬಳೆ ಗಾಜಿನಿಂದ ಗಾಯವಾಗಿದೆ ಎಂದು ಪೊಲೀಸರಿಗೆ ನಾನು ತೋರಿಸಿಲ್ಲ. ಬರವಣಿಗೆಯನ್ನು ಪೋಲಿಸ್ ಠಾಣೆಯಲ್ಲೇ ಮಾಡಿದ್ದಾರೆ. ಮಹಜರಿಗೆ ಚಾಸಾ–7 ಮತ್ತು 8 ರವರು ಸಹಿ ಹಾಕಿದ್ದಾರೆ. ಚಾಸಾ–7 ನನ್ನ ತಂದೆಯ ಕಡೆಯವರು. ಅವರಿಬ್ಬರು ನನ್ನ ತಂದೆಯ ಮನೆ ಮತ್ತು ಗಂಡನ ಮನೆಯಲ್ಲಿ ಸಹಿ ಹಾಕಿದರು. ದೂರು ಕೊಟ್ಟ ನಂತರ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಮದುವೆಯ ಸಮಯದಲ್ಲಿ ಹಣ ಮತ್ತು ಚಿನ್ನ ಕೊಟ್ಟಿದ್ದನ್ನು ಎಲ್ಲರೂ ನೋಡಿಲ್ಲ. ಚಿನ್ನ ಕೊಟ್ಟ ಬಗ್ಗೆ ರಶೀದಿ ಇದೆಯೇ ಎಂದರೆ ಆರೋಪಿತರ ಬಳಿ ಇದೆ. 3 ಲಕ್ಷ ವರದಕ್ಷಿಣೆ ಕೇಳಿದ್ದನ್ನೂ ನೋಡಿದವರು ಇದ್ದಾರೆಯೇ ಎಂದರೆ ಮನೆಯ ಒಳಗೆ ಕೇಳಿದ್ದರಿಂದ ಬೇರೆ ಯಾರು ನೋಡಿಲ್ಲ. ಮದುವೆಯ ಸಮಯದಲ್ಲಿ 50 ಸಾವಿರ ನಗದು ಮತ್ತು 10 ಗ್ರಾಂ ಚಿನ್ನ ಕೊಡುವ ಆರ್ಥಿಕ ಶಕ್ತಿ ನನ್ನ ತಂದೆಗೆ ಇರಲಿಲ್ಲ ಎಂದರೆ ಬಡ್ಡಿ ಸಾಲ ತಂದು ಕೊಟ್ಟಿದ್ದಾರೆ. ಆರೋಪಿತರು ನನಗೆ ಹಿಂಸೆ ಕಿರುಕುಳ ಕೊಟ್ಟಿದ್ದನ್ನು ಆರೋಪಿತರ ಊರಿನಲ್ಲಿ ನೋಡಿದವರು ಯಾರು ಇಲ್ಲ. ಈ ಕೇಸಿಗೋಸ್ಕರ ನಿಪಿ–3 ರ ಲಗ್ನ ಪತ್ರಿಕೆಯನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಕೇವಲ

6-7 ತಿಂಗಳು ಮಾತ್ರ ಆರೋಪಿತರ ಮನೆಯಲ್ಲಿ ವಾಸವಿದ್ದು ನಂತರ ತಂದೆಯ ಮನೆಗೆ ಹೋಗಿ ಈ ರೀತಿ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. 3ನೇ ಆರೋಪಿ ಪಂಚಾಯ್ತಿಯಲ್ಲಿ ಮುಖಂಡರಾಗಿದ್ದರು ಎಂದರೆ ಸರಿಯಲ್ಲ. ಅವರು ನನ್ನ ತಾತನ ಕಡೆಯಿಂದ ಸಂಬಂಧಿಕರು. 3ನೇ ಆರೋಪಿ ನನ್ನ ಮತ್ತು 1ನೇ ಆರೋಪಿಯ ಮಧ್ಯೆ ಇರುವ ವ್ಯತ್ಯಾಸವನ್ನು ಸರಿಪಡಿಸಿಕೊಂಡು ಹೋಗುವಂತೆ ಹೇಳಿದ್ದರು ಎಂದರೆ ಸರಿಯಲ್ಲ. 4ನೇ ಆರೋಪಿಯನ್ನು 1ನೇ ಆರೋಪಿ 2ನೇ ಮದುವೆಯಾಗಿದ್ದಾರೆ ಎಂದು ನೋಡಿದವರು ಇಲ್ಲ. 4ನೇ ಆರೋಪಿ 2ನೇ ಆರೋಪಿಯ ದೂರದ ಸಂಬಂಧಿ ಎಂದರೆ ಸರಿಯಲ್ಲ. 2ನೇ ಆರೋಪಿಯನ್ನು ನೋಡಿಕೊಳ್ಳಲು ಯಾರು ಇಲ್ಲದೇ ಇದ್ದ ಕಾರಣ 1ನೇ ಆರೋಪಿಯೊಂದಿಗೆ ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ 4ನೇ ಆರೋಪಿ ಬಂದಿದ್ದರು ಎಂದರೆ ಸರಿಯಲ್ಲ. 2ನೇ ಆರೋಪಿಯ ಉಳಿದ ಮಕ್ಕಳು ಬೇರೆ ಬೇರೆ ವಾಸವಿದ್ದಾರೆ ಎಂದರೆ ಬೇರೆ ಬೇರೆ ಇದ್ದರೂ ಕೂಡ 2ನೇ ಆರೋಪಿಯನ್ನು ನೋಡಿಕೊಳ್ಳುತ್ತಾರೆ. ಅವರು ಬೇರೆ ಇರುವ ಕಾರಣ 2ನೇ ಆರೋಪಿಯ ಸ್ನಾನ ಮಾಡಿಸಲೆಂದು 1ನೇ ಆರೋಪಿ 4ನೇ ಆರೋಪಿಯನ್ನು ಮನೆಗೆ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. 4ನೇ ಆರೋಪಿ ಈಗಲೂ ಕೂಡ ತನ್ನ ತಂದೆಯ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸರಿಯಲ್ಲ. 1 ಮತ್ತು 4ನೇ ಆರೋಪಿತರು ಗಂಡ ಹೆಂಡತಿ ಎನ್ನುವ ಬಗ್ಗೆ ನಿಮ್ಮ ಬಳಿ ದಾಖಲೆ ಇದೆಯೇ ಎಂದರೆ ಒಟ್ಟಿಗೆ ಹೋಗುತ್ತಿದ್ದ ಒಂದು ಫೋಟೋ ಇದೆ. ಸದರಿ ಫೋಟೋವನ್ನು ನನ್ನ ತಂಗಿ ಮತ್ತು ಇತರರು ತೆಗೆದಿದ್ದಾರೆ. ಆ ಫೋಟೋವನ್ನು ಪೊಲೀಸರಿಗೆ ಕೊಟ್ಟಿಲ್ಲ. ಪೊಲೀಸಿನವರೇ ತೆಗೆದುಕೊಂಡು ಬಂದಿದ್ದಾರೆ. 1ನೇ ಆರೋಪಿ 2ನೇ ಮದುವೆ ಆಗಿಲ್ಲ. ಮದುವೆಯಾದ ಹೊಸದರಲ್ಲಿ ನನಗೂ 1ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದು ಪತ್ರ ಬರೆದುಕೊಟ್ಟು

ನಾನು ನನ್ನ ತಂದೆಯ ಮನೆಯಲ್ಲಿ ವಾಸ ಇದ್ದೆ ಎಂದರೆ ಸರಿಯಲ್ಲ. ಮದುವೆಯಾದ 6 ತಿಂಗಳ ನಂತರ ನಾನು ತಂದೆಯ ಮನೆಯನ್ನು ಸೇರಿಕೊಂಡವಳು ನಾನು ವಾಪಸ್ಸು ಗಂಡನ ಮನೆಗೆ ಬಂದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಬಂದು ಬಾಳಾಟ ಮಾಡು ಇಲ್ಲದೇ ಇದ್ದರೆ ಡೈವರ್ಸ್ ಕೊಡು ಎಂದು ಕೇಳಿದರು ಎಂದರೆ ಸರಿಯಲ್ಲ. ನಾನು 3 ಲಕ್ಷ ಕೊಟ್ಟರೇ ಡೈವರ್ಸ್ ಕೊಡುತ್ತೇನೆ ಎಂದು ಹೇಳಿದೆ ಎಂದರೆ ಸರಿಯಲ್ಲ.

ಯಾವ ಆರೋಪಿ ಏನು ಮಾಡಿದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಆರೋಪಿತರು ನನ್ನ ಮಧ್ಯೆ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿಗೆ ಆರೋಗ್ಯ ಸರಿಯಿಲ್ಲ ಎಂದರೆ ಈಗ ಆರೋಗ್ಯ ಸರಿಯಿಲ್ಲ. 2ನೇ ಆರೋಪಿಗೆ 85 ವರ್ಷಕ್ಕೂ ಹೆಚ್ಚು ವಯಸ್ಸಾಗಿರುವ ಕಾರಣ ನನಗೆ ಯಾವುದೇ ಹಲ್ಲೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಮದುವೆಯಾದ ಹೊಸದರಲ್ಲಿ ರವಿ ಎಂಬುವಾತ ಮನೆಗೆ ಬರುತ್ತಿದ್ದನ್ನು 2ನೇ ಆರೋಪಿ ಪ್ರಶ್ನೆ ಮಾಡಿದ್ದರಿಂದ ಅವರನ್ನು ಈ ಪ್ರಕರಣದಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 04.03.2024 ರಂದು 1ನೇ ಆರೋಪಿ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತರು ನನ್ನಿಂದ ವರದಕ್ಷಿಣೆ ತರುವಂತೆ ಬೇಡಿಕೆ ಇಟ್ಟಲ್ಲ ಎಂದರೆ ಸರಿಯಲ್ಲ. ಅನ್ಯತಾ ಪಾಯಿದೆ ಪಡೆಯಲು ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಜೀವಾನಾಂಶ ಕೋರಿ ನಾನು ಅರ್ಜಿ ಸಲ್ಲಿಸಿಲ್ಲ. ಆರೋಪಿತರಿಂದ ಹೆಚ್ಚು ಹಣ ವಸೂಲಿ ಮಾಡಲು ಸ್ವಾಮಿ ಎಂಬುವವರನ್ನು ಕರೆದುಕೊಂಡು ಹೋಗಿ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.